ಪತ್ರಿಕಾ ತುಣುಕುಗಳು
PAPER CLIPPINGS
ವಿಷಯ : DEPARTMENT / SUBJECT:
ಪತ್ರಿಕೆ : NAME OF THE NEWS PAPER:
ದಿನಾಂಕ : DATE:

# ಗಲಭೆಗೆ ಕೃಷ್ಣ ಜನ್ಮಾಷ್ಟಮಿ ದಿನ ಟಾರ್ಗೆಟ್!

## ಪಿಎಫ್‌ಐ, ಎಸ್‌ಡಿಪಿಐ ಕಾರ್ಯಕರ್ತರಿಂದಲೇ ಗಲಭೆ | ಡಿಜೆ ಹಳ್ಳಿ, ಕೆಜಿ ಹಳ್ಳಿ ಗಲಭೆ ಯೋಜಿತ ಸಂಚು

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಗಲಭೆ ಪೂರ್ವಯೋಜಿತ ಕೃತ್ಯ. ದೇಶದಲ್ಲಿ ತ್ರಿವಳಿ ತಲಾಖ್ ರದ್ದು, ಎನ್‌ಆರ್‌ಸಿ ಜಾರಿ ಮತ್ತು ರಾಮಮಂದಿರಕ್ಕೆ ಗುದ್ದಲಿ ಪೂಜೆ ವಿಷಯ ಮುಂದಿಟ್ಟುಕೊಂಡು ಪಿಎಫ್‌ಐ ಮತ್ತು ಎಸ್‌ಡಿಪಿಐ ಕಾರ್ಯಕರ್ತರು ಗಲಭೆ ನಡೆಸಿದ್ದಾರೆ ಎಂದು ದೋಷಾರೋಪಪಟ್ಟಿಯಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಉಲ್ಲೇಖಿಸಿದೆ.

ಇತ್ತೀಚೆಗೆ ಎನ್‌ಐಎ ಅಧಿಕಾರಿಗಳು ನಗರದ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದು, ಇನ್ನಷ್ಟು ಸ್ಫೋಟಕ ಮಾಹಿತಿಗಳು ಬಹಿರಂಗವಾಗಿವೆ. ಎನ್‌ಆರ್‌ಸಿ, ಸಿಎಎ ಮತ್ತು ಅಯೋಧ್ಯೆ ವಿರುದ್ಧ ಅತೃಪ್ತರಾಗಿದ್ದ ಕಿಡಿಗೇಡಿಗಳು ಶಾಂತಿ ಕದಡಲು ಸಂಚು ರೂಪಿಸಿದ್ದರು. ಸಹಚರರ ಜತೆ ಸೇರಿ ಪ್ರಮುಖ ಆರೋಪಿ ಫೈರೋಜ್ ಪಾಷಾ ಸಂಚು ಮಾಡಿದ್ದ. ಫೇಸ್‌ಬುಕ್‌ನಲ್ಲಿ ಹಿಂದು ದೇವರನ್ನು ಅವಮಾನಿಸುವ ವಿವಾದಾತ್ಮಕ ಪೋಸ್ಟ್‌ಗಳನ್ನು ಅಪ್‌ಲೋಡ್ ಮಾಡಿ ಹಿಂದುಗಳಿಗೆ ಪ್ರಚೋದನೆ ನೀಡಲು ಆರೋಪಿಗಳು ನಿರ್ಧಾರ ಮಾಡಿದ್ದರು.

» **ಎನ್‌ಐಎ ತನಿಖೆಯಲ್ಲಿ ಕಿಡಿಗೇಡಿಗಳ ಬಣ್ಣ ಬಯಲು**

**ಕೆರಳಿಸುವ ವಿಡಿಯೋ ಅಪ್‌ಲೋಡ್:** ಶ್ರೀಕೃಷ್ಣ ಜನ್ಮಾಷ್ಟಮಿ ದಿನವಾದ 2020ರ ಆಗಸ್ಟ್ 11 ರ ದಿನಾಂಕವನ್ನೇ ಕೃತ್ಯ ಎಸಗಲು ಆರೋಪಿಗಳು ನಿಗದಿ ಮಾಡಿದ್ದರು. ಅಂದು ಮಧ್ಯಾಹ್ನ 1.05ಕ್ಕೆ ವಿವಾದಾತ್ಮಕ ವಿಡಿಯೋ ತುಣುಕನ್ನು ಫೈರೋಜ್ ಪಾಷಾ ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡಿ ಅವಾಚ್ಯವಾಗಿ ಕಮೆಂಟ್ ಹಾಕಿದ್ದ. ಅಷ್ಟೇ ಅಲ್ಲದೆ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಸಹೋದರರ ಸಂಬಂಧಿ ನವೀನ್‌ಗೆ ಟ್ಯಾಗ್ ಮಾಡಿದ್ದ. ಇದಕ್ಕೆ ಪ್ರತಿಕ್ರಿಯೆ ನೀಡಿದ ನವೀನ್ ವಿವಾದಾತ್ಮಕ ಕಾರ್ಟೂನ್ ಪೋಸ್ಟ್ ಮಾಡಿದ್ದ. ಆಗ ಪೂರ್ವ ಸಂಚಿನಂತೆ ಕಿಡಿಗೇಡಿಗಳು ರಾಜಕೀಯ ವಿರೋಧಿಗಳನ್ನು ಮುಗಿಸಲು ಮತ್ತು ಗಲಭೆ ಸೃಷ್ಟಿಸುವ ಉದ್ದೇಶದಿಂದ ನವೀನ್ ಪೋಸ್ಟ್ ಅನ್ನು ಸ್ಕ್ರೀನ್ ಶಾಟ್ ತೆಗೆದು ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ಕಳುಹಿಸಿ ಪ್ರಚೋದನೆ ನೀಡಿದರು.



ಧರ್ಮದ ರಕ್ಷಣೆಗೆ ಪ್ರಾಣ ತ್ಯಾಗ ಮಾಡಬೇಕು ಎಂದು ಕರೆ ನೀಡಿದರು. ಈ ಪೋಸ್ಟ್ ಮಾಡಿದ ನವೀನ್, ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮತ್ತು ಇಸ್ಲಾಂ ಧರ್ಮದ ವಿಷಯಕ್ಕೆ ಬರುವ ಹಿಂದುಗಳಿಗೆ ಬುದ್ಧಿ ಕಲಿಸಬೇಕು. ಗುಂಪು ಗುಂಪಾಗಿ ಬನ್ನಿ ಎಂದು ಕಿಡಿ ಹಬ್ಬಿಸಿದರು. ಮುಸ್ಲಿಂ ಧರ್ಮ ಗುರುಗಳಿಗೆ ಅವಹೇಳನಕಾರಿ ಬರಹ ಪೋಸ್ಟ್ ಮಾಡಿದವರ ವಿರುದ್ಧ ಭಾರಿ ಮಟ್ಟದಲ್ಲಿ ಗಲಾಟೆ ಮಾಡಿದರೆ ನ್ಯಾಯ ಸಿಗಲಿದೆ ಎಂದು ಉದ್ರಿಕ್ತ ಗುಂಪನ್ನು ಕೆರಳಿಸಿ ಕಿಡಿಗೇಡಿಗಳು ಬೆಂಕಿ ಹಚ್ಚಿಸಿದರು ಎಂಬುದು ಎನ್‌ಐಎ ತನಿಖೆಯಲ್ಲಿ ಬಹಿರಂಗವಾಗಿದೆ.

## ಎನ್‌ಒಸಿ ನೆಪ 1.5 ಕೋಟಿ ರೂ. ವಂಚನೆ

**ಬೆಂಗಳೂರು:** ಬಳ್ಳಾರಿಯ ಸಂಡೂರಿನಲ್ಲಿ ಮೈನಿಂಗ್ ನಡೆಸಲು ಗುತ್ತಿಗೆಗೆ 550 ಎಕರೆ ಜಾಗ ಸಿಕ್ಕಿರುವುದಾಗಿ ಸುಳ್ಳು ಹೇಳಿ ಇದಕ್ಕೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಕೊಡಿಸುವುದಾಗಿ ಇಬ್ಬರು ವಂಚಕರು 1.5 ಕೋಟಿ ರೂ. ಪಡೆದು ಮೋಸ ಮಾಡಿದ್ದಾರೆ.

ದೆಹಲಿ ಮೂಲದ ಬೇಶಾಂಬರ್ ಎಂಬಾತ ನೀಡಿದ ದೂರಿನ ಅನ್ವಯ ಮುಂಬೈ ಮೂಲದ ರಾಜ್‌ಕುಮಾರ್ ಅಗರ್‌ವಾಲ್, ಬೆಂಗಳೂರಿನ ರಾಘವೇಂದ್ರ ಎಂಬುವರ ವಿರುದ್ಧ ವಿಧಾನಸೌಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

» **550 ಎಕರೆ ಜಾಗ ಸಿಕ್ಕಿರುವುದಾಗಿ ಸುಳ್ಳು ದಾಖಲೆ ತೋರಿಸಿ ಮೋಸ**

ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ನ ಮಾಲೀಕ ರಾಜಕುಮಾರ್ ಅಗರ್‌ವಾಲ್ ತನಗೆ ಬಳ್ಳಾರಿಯ ಸಂಡೂರಿನಲ್ಲಿ ಮೈನಿಂಗ್ ನಡೆಸಲು ಭೋಗ್ಯಕ್ಕೆ 550 ಎಕರೆ ಜಾಗ ಸಿಕ್ಕಿದೆ ಎಂದು ಬೇಶಾಂಬರ್ ಸ್ನೇಹಿತ ರಾಧಾಕೃಷ್ಣ ಅಯ್ಯರ್ ತಿಳಿಸಿದ್ದ. ಅಲ್ಲದೆ, ಮೈನಿಂಗ್ ನಡೆಸಲು ರಾಧಾಕೃಷ್ಣ ಅವರನ್ನು ಪಾಲುದಾರರನ್ನಾಗಿ ಮಾಡುವುದಾಗಿ ಹೇಳಿ 2014ರಲ್ಲಿ ರಾಧಾಕೃಷ್ಣ ಜತೆ ಕರಾರು ಮಾಡಿಕೊಂಡಿದ್ದ. ಬಳಿಕ ಅಗರ್‌ವಾಲ್ ಮೈನಿಂಗ್ ಭೋಗ್ಯದ ಬಗ್ಗೆ ಸುಳ್ಳು ಮಾಹಿತಿ ನೀಡಿ ರಾಧಾಕೃಷ್ಣ ಅವರಿಂದ 50 ಲಕ್ಷ ರೂ. ಪಡೆದುಕೊಂಡಿದ್ದ. ನಂತರ ಭೋಗ್ಯಕ್ಕೆ ಜಾಗ ಪಡೆಯಲು ಎನ್‌ಒಸಿ ಬೇಕಿದೆ ಎಂದು ಹೇಳಿದ್ದ.

ರಾಧಾಕೃಷ್ಣಗೆ 2015ರಲ್ಲಿ ರಾಘವೇಂದ್ರನ ಪರಿಚಯವಾಗಿತ್ತು. ಆತ ತನಗೆ ರಾಜಕೀಯ ಪ್ರಭಾವಿ ವ್ಯಕ್ತಿಗಳು, ಸರ್ಕಾರಿ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳ ಪರಿಚಯವಿದ್ದು, ಅವರ ಮೂಲಕ ಯಾವುದೇ ಕೆಲಸವನ್ನೂ ಮಾಡಿಸಿಕೊಡುವುದಾಗಿ ನಂಬಿಸಿದ್ದ. ಅಗರ್‌ವಾಲ್ ಜತೆ ಒಪ್ಪಂದವಾಗಿದ್ದ ಮೈನಿಂಗ್ ಭೋಗ್ಯ ಕರ್ನಾಟಕ ಸರ್ಕಾರದಲ್ಲಿ ಎನ್‌ಒಸಿಗಾಗಿ ಬಾಕಿ ಉಳಿದುಕೊಂಡಿದೆ ಎಂದು ಆತನಿಗೆ ರಾಧಾಕೃಷ್ಣ ಹೇಳಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪುತ್ರ ಪರಿಚಯವಿದ್ದು, 4 ಕೋಟಿ ರೂ. ಕೊಟ್ಟರೆ ಕೆಲಸ ಮಾಡಿಸಿಕೊಡುವುದಾಗಿ ತಿಳಿಸಿದ್ದ. 2015ರ ಆ... ಂದು ಮೈನಿಂಗ್ ಎನ್‌ಒಸಿ ಸಂಬಂಧ ಮಾತನಾಡಲು ರಾಧಾಕೃಷ್ಣ ಪರ ಬೇಶಾಂಬರ್ ದೆಹಲಿಯಿಂದ ಬೆಂಗಳೂರಿಗೆ ಬಂದು ರಾಘವೇಂದ್ರಗೆ ಮುಂಗಡವಾಗಿ 1 ಕೋಟಿ ರೂ. ಕೊಟ್ಟ...

### ಹಣ ವಾಪಸ್ ಕೇಳಿದಾಗ ಬೆದರಿಕೆ

2015 ಅಕ್ಟೋಬರ್‌ನಲ್ಲಿ ಬೇಶಾಂಬರ್‌ಗೆ ಕರೆ ಮಾಡಿದ್ದ ರಾಘವೇಂದ್ರ, 'ಮೈನಿಂಗ್ ಭೋಗ್ಯ ವಿಷಯ ವಿಶೇಷ ತನಿಖಾ ತಂಡ (ಎಸ್‌ಐಟಿ)ದಲ್ಲಿದೆ. ಹೀಗಾಗಿ ಎನ್‌ಒಸಿ ಸಿಗುವುದಿಲ್ಲ. ನಿಮ್ಮ ಹಣ ಮುಖ್ಯಮಂತ್ರಿ ಪುತ್ರನ ಬಳಿಯಿದ್ದು, ಅವರು ಬಂದ ಬಳಿಕ ಹಿಂತಿರುಗಿಸುವುದಾಗಿ ತಿಳಿಸಿದ್ದ. 2016 ಫೆ.4ರಂದು ಅಗರ್‌ವಾಲ್ ಜತೆಗಿನ ಪಾಲುದಾರಿಕೆಯನ್ನು ರಾಧಾಕೃಷ್ಣ ಡಿಸಲೂಷನ್ ಡಿಡ್ ಮೂಲಕ ಮುಕ್ತಾಯ ಮಾಡಿದ್ದರು. ಬಳಿಕ ರಾಘವೇಂದ್ರನನ್ನು ಸಂಪರ್ಕಿಸಿದ ರಾಧಾಕೃಷ್ಣ, 1 ಕೋಟಿ ರೂ. ಹಿಂತಿರುಗಿಸುವಂತೆ ಕೇಳಿಕೊಂಡರು. ಪ್ರಭಾವಿ ರಾಜಕಾರಣಿಗಳು, ರೌಡಿಗಳ ಪರಿಚಯವಿದೆ ಎಂದು ಬೆದರಿಸಿದ್ದ ರಾಘವೇಂದ್ರ ಹಣ ಹಿಂದಿರುಗಿಸಿರಲಿಲ್ಲ. ಇತ್ತ ಮೈನಿಂಗ್ ಭೋಗ್ಯದ ಬಗ್ಗೆ ಸುಳ್ಳು ದಾಖಲೆ ಹಾಗೂ ಮಾಹಿತಿಗಳನ್ನು ನೀಡಿ 50 ಲಕ್ಷ ರೂ. ಪಡೆದಿದ್ದ ಅಗರ್‌ವಾಲ್ ಸಹ ಹಣ ಹಿಂದಿರುಗಿಸಿಲ್ಲ ಎಂದು ಬೇಶಾಂಬರ್ ದೂರಿನಲ್ಲಿ ಆರೋಪಿಸಿದ್ದಾರೆ.